ಕವಲೊಡೆದ ಎರಡು ಹಾದಿ ಪ್ರಯಾಣವಾದರೂ ರಾತ್ರಿ ಗುರಿ ಒಂದೇಯಾದ್ದರಿಂದ ಅಂತಹ ಬದಲಾವಣೆಯೇನೂ ಆಗಿರಲಿಲ್ಲ. ಆಫೀಸನ್ನು ಗೌಪ್ಯವಾಗಿಟ್ಟಳು. ತಾನೂ ತಲೆ ಕೆಡಿಸಿಕೊಂಡಿರಲಿಲ್ಲವೆಂದು ನೆನಪು. ಆಫೀಸ್ ಟೂರ್‌ಗಳೆಂದು ಇದ್ದಕ್ಕಿದ್ದಂತೆ ಹೊರಟುಹೋಗುತ್ತಿದ್ದಳು. ಯಾವುದೂ ಅಸಂಭವನೀಯವಲ್ಲವಾದ್ದರಿಂದ ಪ್ರಶ್ನಿಸಲಿಲ್ಲವೆಂದು ನೆನಪು. ಆಫೀಸ್ ಗೆಳೆಯರೆಂದು ಒಂದಿಬ್ಬರನ್ನು ಊಟಕ್ಕೆ ಕರೆದುಕೊಂಡು ಬರುತ್ತಿದ್ದಳು, ತರಹೇವಾರಿ ಅಡುಗೆ ಮಾಡಿ, ಚಂದ ಮಾತಾಡಿ ಕಳಿಸುತ್ತಿದ್ದೆನೆಂದು ನೆನಪು.

ಕಬೋರ್ಡ್‌ನಲ್ಲಿ ಇಟ್ಟ ಬಟ್ಟೆಗಳು ಇಟ್ಟಲ್ಲಿ ಇರುವುದಿಲ್ಲವೆಂದು ಕಿತ್ತಾಡಿದಳು, ಮೌನವಾಗಿ ಕೇಳಿಸಿಕೊಂಡೆನೆಂದು ನೆನಪು. ಒಂದು ಕೋಣೆಯ ಒಂದೇ ಕಬೋರ್ಡ್‌ನಲ್ಲಿ ಒಟ್ಟಿಗಿರುತ್ತಿದ್ದ ಬಟ್ಟೆಗಳು ಬೇರೆಯಾಗಿ, ಎಡಭಾಗ ಅವಳಿಗೆ, ಬಲಭಾಗ ತನಗೆ ಎಂದು ಭಾಗವಾದವು. ಆಫೀಸಿನಿಂದ ಲೇಟಾಗಿ ಬರುತ್ತೇನೆ. ಒಂಚೂರು ಗೀಸರ್ ಹಾಕಿಡಲು ಏನು ಕೇಡು ಅಂದಳು; ಬೇಗ ಬಂದಾಗೆಲ್ಲಾ ನೆನಪಿಟ್ಟುಕೊಂಡು ಅವಳ ಸ್ನಾನಕ್ಕಾಗಿ ಗೀಸರ್ ಹಾಕಿಡುತ್ತಿದ್ದೆ. ಅವಳು ಹೇಳದಿದ್ದರೂ ರಾತ್ರಿ ಅಡುಗೆ ಮಾಡಲು ಶುರು ಮಾಡಿದೆನೆಂದು ನೆನಪು. ನೀರುಳ್ಳಿ ದೊಣ್ಣೆಮೆಣಸಿನಕಾಯಿ ತರಹ ಹೆಚ್ಚಿದೀಯಾ ಅಂದಳು. ಆಮೇಲೆ ಸಣ್ಣಗೆ ಹೆಚ್ಚಲು ಕಲಿತೆನೆಂದು ನೆನಪು. ರಿಮೋಟ್ ಹಿಡಿದು ಟೀವಿ ಚಾನಲ್ಲುಗಳನ್ನು ಅಸಹನೆಯಿಂದ ತಿರುಗಿಸುತ್ತಾ ರಾತ್ರಿ ಎಷ್ಟೊತ್ತಿಗೋ ಮಂಚಕ್ಕೆ ಬಂದು ಉರುಳಿಕೊಳ್ಳುತ್ತಿದ್ದಳು. ಅದೂ ಮರೆತಿಲ್ಲವೆನ್ನುವುದು ನೆನಪಿದೆ.

ಹಾಗಾದರೆ ತಾನು ಯಾವುದನ್ನೂ ಮರೆತಿರಲಿಲ್ಲ.

ಅಂಗಳಕ್ಕೆ ಚಿಟ್ಟೆಗಳು ಬರುತ್ತಿದ್ದವು. ಬಹಳ ಸೂಕ್ಷ್ಮ ಚಿಟ್ಟೆಗಳು. ದೂರದಿಂದ ನೋಡುವಾಗ ಅದೆಷ್ಟು ಬಣ್ಣ ಬಣ್ಣ. ಹಿಡಿಯಲು ಹೋದರೆ ನುಸುಳಿಕೊಳ್ಳುವುದೇ ಜಾಸ್ತಿ. ಹಿಡಿದೆಯೆಂದು ಖುಷಿಯಲ್ಲಿ ಸ್ವಲ್ಪ ಗಟ್ಟಿಯಾಗಿ ಅಮುಕಿದರೂ ಹೂವಿನ ಪರಾಗದಂತೆ ರೆಕ್ಕೆಯ ತುಪ್ಪಳ ಕೈಗಂಟಿ, ಕೆಲವೊಮ್ಮೆ ಉಸಿರುಗಟ್ಟಿ ಸಾಯುತ್ತಿದ್ದುದ್ದೇ ಹೆಚ್ಚು. ಹೊಟ್ಟೆಯೊಳಗೂ ಚಿಟ್ಟೆಗಳು ಹಾರಾಡುತ್ತಿದ್ದವು. ಗೋಡೆಯೆಲ್ಲಾ ಚಿಟ್ಟೆಯಿಂದ ಭರ್ತಿಯಾದ್ದರಿಂದ ಖಾಲಿ ಜಾಗವಿಲ್ಲದೇ ಅವು ಪುಳಕ್ಕನೇ ಹೊರ ನುಸುಳಿ ಹೋಗುತ್ತಿದ್ದವು. ಗಾಳಿಯಲ್ಲಿ ಸ್ವಚ್ಛಂದ ಹಾರುತ್ತಿದ್ದವು. ಗೋಡೆಗಂಟಿದ ಹಳೇ ಚಿಟ್ಟೆಗಳು ಮಾಸಿ, ಕಳೆಗುಂದಿರುವುದರಿಂದ ಅದನ್ನು ಕಿತ್ತು ಹೊಸ ಚಿಟ್ಟೆಯಿಂದ ಅಲಂಕರಿಸಬೇಕೆಂದರೂ ಯಾಕೋ ಆಗುತ್ತಿರಲಿಲ್ಲ.

ಆಗ ನಾಲ್ಕು ದಿನ ರಜೆ ಹಾಕಿ ಗೋಡೆ ಕೆರೆಸುವ ಕಾಯಕಕ್ಕೆ ಕೈ ಹಾಕಿದೆನೆಂದು ನೆನಪು. ಗೋಡೆಯನ್ನು ಉಪ್ಪು ಕಾಗದದಲ್ಲಿ ಉಜ್ಜಿ ಹಳತನ್ನು ಹೆರೆಸಿ ತೆಗೆದೆ. ಕಬೋರ್ಡ್‌ನೊಳಗಿನದ್ದೆಲ್ಲಾ ಕಿತ್ತು ಆಚೆ ಎಸೆದೆ. ಸಹಸ್ರಾರು ಡ್ರೆಸ್‌ಗಳೂ, ಅಸಂಖ್ಯ ವಿಧ ವಿಧವಾದ ಒಳ ಉಡುಪುಗಳೂ, ವೈವಿಧ್ಯಮಯ ಆಲಂಕಾರಿಕ ವಸ್ತುಗಳೂ, ಸಂಧಿ ಮೂಲೆಯಲ್ಲಿದ್ದ ಬಣ್ಣ ಬಣ್ಣದ ಲಿಪ್‌ಸ್ಟಿಕ್‌ಗಳೂ, ಲೆಕ್ಕವಿಲ್ಲದಷ್ಟು ನೈಲ್ ಪಾಲಿಷ್‌ಗಳೂ, ರಾಶಿ ಪೋರ್ನೋಗ್ರಾಫಿಕ್ ಪುಸ್ತಕಗಳೂ, ಚಿತ್ರ ವಿಚಿತ್ರವಾದ ಮಾತ್ರೆ, ಔಷಧಿ, ಡ್ರಗ್ಸ್‌ಗಳೂ, ತರಹಾವಾರಿ ಕಾಂಡೋಮ್‌ಗಳೂ, ಒಂದೈದಾರು ಸಿಮ್‌ಗಳೂ, ನೆಲದ ತುಂಬಾ ತಮ್ಮಂತರಂಗವನ್ನ ಚಲ್ಲಾಪಿಲ್ಲಿಯಾಗಿ ಹರಡಿ ತಕಪಕ ಕುಣಿದು ತಟಸ್ಥಗೊಂಡವು.

ತಾನು ಬೆರಗಿನಿಂದ ಅವುಗಳನ್ನೇ ನೋಡುತ್ತಾ ಹಾಗೇ ನಿಂತುಬಿಟ್ಟೆನೆಂದು ನೆನಪು. ಆಗಲೇ ಚಟೀಲೆಂದು ಸಿಡಿಲು ಹೊಡೆದು, ಆರ್ಭಟಿಸುತ್ತಾ ಮಳೆ ಸುರಿಯಲು ಶುರುವಾಯಿತು. ಹಿಂದೆಂದೂ ಕಾಣದ, ಮುಂದೆಂದೂ ಕಾಣದ ಈ ಶತಮಾನದ ಭಾರಿ ದೊಡ್ಡ ಮಳೆ. ಧಾರಾಕಾರ